ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 03 ನೇ ಮಾರ್ಚ್, 2020

ರಾಜ್ಯದಲ್ಲಿ ಮರಳುಗಾರಿಕೆಗಾಗಿ ಪರವಾನಿಗೆ ನೀಡಿರುವ ಬಗ್ಗೆ

ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-

121 (65) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2018-19, 2019-20 ರಲ್ಲಿ ರಾಜ್ಯದಲ್ಲಿ ಎಷ್ಟು ಮಂದಿಗೆ ಮರಳುಗಾರಿಕೆಗಾಗಿ ಪರವಾನಿಗೆ ನೀಡಲಾಗಿದೆ ;

(ಆ) ಅಕ್ರಮ ಮರಳುಗಾರಿಕೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ; ಎಷ್ಟು ದಂಡವನ್ನು ವಸೂಲು ಮಾಡಲಾಗಿದೆ ;

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ `ಸ್ಯಾಂಡ್ ಬಜಾರ್' ಮೂಲಕ ಮರಳು ಖರೀದಿಸುವ ಯೋಜನೆ ಜಾರಿಯಲ್ಲಿದೆಯೇ ; ಇದರಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು ; ಎಷ್ಟು ಟನ್ ಮರಳು ದೊರಕಿಸಿಕೊಡಲಾಗಿದೆ ; (ವಿವರ ನೀಡುವುದು)

(ಈ) ನೆರೆ ರಾಜ್ಯಗಳಿಗೆ ಅಕ್ರಮ ಮರಳು ಸಾಗಾಟ ಮಾಡುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಎಷ್ಟು ಮಂದಿ ಈ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ ; (ವಿವರ ನೀಡುವುದು)

(ಉ) CRZ ಮತ್ತು Non CRZ ವರ್ಗೀಕರಣದಿಂದ ಇಲಾಖೆಗೆ ಆಗಿರುವ ಲಾಭವೇನು ? (ವಿವರ ನೀಡುವುದು)